ಪದಬಂಧ




ಎಡದಿಂದ ಬಲಕ್ಕೆ :

1. 'ಬಣ್ಣದ ಹಾರ' ಎಂಬಂತೆ ಮೂಲ ಅಕ್ಷರಗಳ ಪಟ್ಟಿ (4)
3. ವಿವರಣೆ ಕೇಳಿದೊಡನೆ ಬಣ್ಣವೆಲ್ಲ ಮಾಯ (3)
4. ಸರಕಿನ ಮಧ್ಯೆ ಹಿಂದಿರುಗಿ ಬಂದದ್ದು ಪುಟ್ಟದೊಂದು ಹಕ್ಕಿ (3)
6. ಕೆಲಸಗಾರನಾಗಿ ಬಂದು ಇಲ್ಲೇ ಶಾಶ್ವತ ವಾಸ್ತವ್ಯ ಹೂಡಿದವ ಈತ (4)
7. ಭರ್ತಿ ಮಾಡಿತು ನೋಡಿ, ಕಡಲಿನ ಉಬ್ಬರ (3)
9. ನಸು ನಸುವೇ ಇರಲಿ, ನೀರಲ್ಲಿ ಅದ್ದು (3)
11. ಸಾಮಾನ್ಯರೇ ಅಲ್ಲಿ ಎಲ್ಲರೂ, ಸ್ವಲ್ಪ ಹೆಚ್ಚು ಕಡಿಮೆ (3)
13. ಪದ್ಯವನ್ನು ಹಾಡಿದವರಿಗೆ ಬಹುಮಾನ ಸುವಾಸನೆಯ ಸೊಪ್ಪು (3)
15. ಉಸಿರು ಬಿಗಿ ಹಿಡಿದು ಎಲ್ಲವೂ ಕಳಚಿ ಬೀಳುವಂತೆ ಮಾಡು (4)
17. ಕಣ್ಣೀರುಹರಿಸಿದವ ಭಾರೀ ದಯಾಳು (3)
18. ಸರ್ಪದ ಹಾಗೆ ಕಾಣಿಸುವ ವಿಚಿತ್ರ ಪಾದರಕ್ಷೆ (3)
19. ಸುಂದರನಾದ ಅರಸ ನೀಡಬಲ್ಲನೇ ಅಮೃತ ? (4)

ಮೇಲಿಂದ ಕೆಳಕ್ಕೆ :

1. ವೇಣು ವಾದನದ ವಿಧಾನ ಕುರಿತ ವಿಸ್ತಾರ ವಿವರಣೆ (3)
2. ಗಳಿಕೆಯ ಎಲ್ಲ ಲೆಕ್ಕಗಳನ್ನೂ ಬರೆಯುವವ ಈತನೇ (3)
3. ಅವರೆಲ್ಲ ವಾಸವಿರುವ ಪ್ರದೇಶದ ವೈಶಾಲ್ಯ ಏನು ? (3)
5. ಸಮಾಚಾರಗಳನ್ನೆಲ್ಲ ಸಂಗ್ರಹಿಸಿಡಬೇಕೆಂಬ ನಿರ್ದೇಶನ ಬಂದಿದೆ (3)
7. ಬಗೆಹರಿಸುವ ಜವಾಬ್ದಾರಿಯನ್ನು ನೀನೇ ಹೊತ್ತುಕೋ (3)
8. ಇರುಳಿನಲ್ಲಿ ಸಂಗ್ರಹಿಸಿ ತಂದದ್ದು ಇಷ್ಟೂ ಚಿಗುರು (3)
9. ಪುಣ್ಯ ತರುವ ಕೆಲಸಗಳ ಬಗೆಗೇ ಸದಾ ಸ್ಮರಣೆ (3)
10. ಸಾಮಾನ್ಯ ವ್ಯಕ್ತಿಯೇ ಆದರೂ ಆಕೆಯದು ನಿರ್ಮಲ ಚಿತ್ತ (3)
12. ಭಾರೀ ಮಲ್ಲಿಗೆ ತೋಟಕ್ಕೆ ಆತನೇ ಒಡೆಯ (3)
14. ದೇವರ ಮನೆಗೆಂದು ತಂದದ್ದು ಈ ಸುಂದರ ಸೊಡರು (3)
15. ವೀಣೆ ನುಡಿಸುವ ಮುನ್ನ ಊಟ ಬರಲಿ (3)
16. ಹೊಸ ಸಾಹಸ ಮುಗಿಸಿದ್ದಕ್ಕೆ ಇಂಥ ಸುಂದರ ನಗು (3)

## 07-12-2017ರ ಉತ್ತರಗಳು

ಎಡದಿಂದ ಬಲಕ್ಕೆ :

1. ಅಯಾಚಿತ ; 3. ಧರಣಿ ; 4. ಗುರುತ್ವ ; 6. ತಡಸಲು ; 7. ಅನುಪಮ ; 9. ಶತಮಾನ ; 11. ಕನವರ ; 13. ನಮಸ್ಕಾರ ; 15. ಮಾನಹಾನಿ ; 17. ತೆಪರ ; 18. ಕಲಕು ; 19. ಕಲೆಗಾರ

ಮೇಲಿಂದ ಕೆಳಕ್ಕೆ:

1. ಅಣಿತ ; 2. ತಗುಲು; 3. ಧನಪ (= ಧನಪತಿ ); 5. ತ್ವರಿತ ; 7. ಅನೇಕ ; 8. ಮಕರ ; 9. ಶಮನ ; 10. ನಗರ ; 12. ವನಿತೆ ; 14. ಮಸುಕು ; 15. ಮಾರಕ ; 16. ನಿಖರ

## ಪ್ರಶ್ನಾ ಂಕಣ

# ಕಡಲ ಹಸು ಇದೆಯೇ ?

ಹೌದು, ಇದೆ. ಹಲವಾರು ವಿಧಗಳಲ್ಲಿ 'ಹಸು'ವನ್ನೇ ಹೋಲುವ ವಿಶಿಷ್ಟ ಪ್ರಾಣಿಯೊಂದು ಕಡಲಲ್ಲಿದೆ. ಸ್ತನಿ ವರ್ಗಕ್ಕೇ ಸೇರಿದ, ಹಸುವಿನಂತೆಯೇ ದೊಡ್ಡ ಶರೀರದ, ನಾಲ್ಕು 'ಕಾಲು'ಗಳನ್ನು ಹೊಂದಿದ, ಪ್ರಶಾಂತ ಸ್ವಭಾವದ, ಮಂದಗಾಮೀ ಓಡಾಟದ, ಸಸ್ಯಗಳನ್ನೇ ಮೇಯುವ ಆಹಾರ ಕ್ರಮದ, ... ಆದರೆ ಸಂಪೂರ್ಣ ಸಾಗರ ವಾಸಿಯಾದ ಆ ಪ್ರಾಣಿಯ ವಾಸ್ತವದ ಹೆಸರು 'ಮ್ಯಾನೆಟೀ'( ಚಿತ್ರ1). ಹಾಗೆ ಹಸುವಿನೊಂದಿಗಿನ ಬಹು ವಿಧ ಸಾಮ್ಯಗಳಿಂದಾಗಿ ಅದಕ್ಕೆ 'ಕಡಲ ಹಸು' ಎಂಬ ವಿಶೇಷ ಅಭಿಧಾನ ಬಂದಿದೆ.

ಹಾಗೆಂದು ಈ ಕಡಲ ಹಸುಗಳ ವಾಸ ಸಾಗರಾವಾರಕ್ಕಷ್ಟೇ ಸೀಮಿತವಾಗಿಲ್ಲ. ನದಿಗಳ ಶುದ್ಧ ನೀರಿನಲ್ಲಿ, ಕಡಲಿನ ಉಪ್ಪು ನೀರಿನಲ್ಲಿ ಹಾಗೂ ನದೀ ಮುಖಜಗಳ ಈ ಇಬ್ಬಗೆಯ ನೀರೂ ಬೆರೆತ ನೆಲೆಗಳಲ್ಲೂ ಬದುಕಬಲ್ಲ ಸಾಮರ್ಥ್ಯ ಈ ಪ್ರಾಣಿಗೆ ಇದೆ. ಸ್ತನಿ ವರ್ಗದ 'ಟ್ರಿಚೆಕಿಡೀ' ಕುಟುಂಬದ ಈ ಕಡಲ ಹಸುಗಳಲ್ಲಿ ಮೂರು ಪ್ರಭೇದಗಳಿವೆ : "ಅಮಜ಼ೋನಿಯನ್ ಮ್ಯಾನೆಟೀ, ವೆಸ್ಟ್ ಇಂಡಿಯನ್ ಮ್ಯಾನೆಟೀ ಮತ್ತು ವೆಸ್ಟ್ ಆಫ್ರಿಕನ್ ಮ್ಯಾನೆಟೀ' ಇದೇ ಕುಟುಂಬದಲ್ಲಿ "ಡ್ಯೂಗಾಂಗ್" ಎಂಬ ಇವುಗಳ ಅತಿ ನಿಕಟ ಸಂಬಂಧಿಯೂ ಒಂದಿದೆ.

ವಯಸ್ಕ ಹಂತದ ವೇಳೆಗೆ ಹದಿಮೂರು ಅಡಿ ಉದ್ದ, ಆರು ನೂರು ಕಿಲೋ ತೂಕ ತಲುಪುವ ಮ್ಯಾನೆಟೀಗಳದು ಒಂಟಿ ಜೀವನ ಕ್ರಮ. ಆದರೆ ಹುಟ್ಟಿದ ಮರಿಯೊಡನೆ ಅದು ಪ್ರೌಢವಾಗುವವರೆಗೂ ತಾಯಿಯದು ಗಾಢ ಸಾಹಚರ್ಯ(ಚಿತ್ರ1). ತಾವು ವಾಸಿಸುವ ಜಲಾವಾರದ ನೆಲದಲ್ಲಿ ಬೆಳೆವ ಮತ್ತು ನೀರಲ್ಲಿ ಹರಡಿದ ಜಲ ಸಸ್ಯಗಳೇ ಕಡಲ ಹಸುಗಳ ಮೇವು (ಚಿತ್ರ 2). ದಿನದ ಸುಮಾರು ಅರ್ಧದಷ್ಟು ಕಾಲ ನೀರಲ್ಲಿ ಸಂಪೂರ್ಣ ಮುಳುಗಿಯೇ ಉಳಿವ, ಪ್ರತಿ ಹದಿನೈದುಇಪ್ಪತ್ತು ನಿಮಿಷಗಳಿಗೊಮ್ಮೆ ಉಸಿರನ್ನೆಳೆದುಕೊಳ್ಳಲು ತಿಮಿಂಗಿಲಗಳಂತೆ ನೀರಿಂದ ಹೊರಕ್ಕೆ ತಲೆ ಎತ್ತುವ ಈ ಪ್ರಾಣಿ ಜೈವಿಕವಾಗಿ ಆನೆಗಳಿಗೆ ಹೆಚ್ಚು ಹತ್ತಿರದ ಸಂಬಂಧಿ; "ನೂರಕ್ಕೆ ನೂರು ಜಲವಾಸಿಯಾದ ಏಕೈಕ ಸಸ್ಯಾಹಾರೀ ಸ್ತನಿ" ಎಂಬ ವಿಶಿಷ್ಟ ದಾಖಲೆ ಕೂಡ ! ಈಜಲು ನೆರವಾಗಲೆಂದೇ ವಿನ್ಯಾಸಗೊಂಡಿರುವ ನಾಲ್ಕು ಕಾಲುಗಳನ್ನು ಬಳಸಿ ನಿಧಾನವಾಗಿ ಈಜಾಡುವ ಮ್ಯಾನೆಟೀ ತಾಸಿಗೆ ಐದರಿಂದ ಎಂಟು ಕಿಲೋ ಮೀಟರ್ ವೇಗದಲ್ಲಿ ಅತ್ಯಂತ ಸಲೀಸಾಗಿ ಈಜಬಲ್ಲದು. ಕಡಲ ಹಸುಗಳ ಸರಾಸರಿ ಆಯುಷ್ಯ ಐವತ್ತು ವರ್ಷ.




ಮತ್ತೊಂದು ವಿಶೇಷ ಏನೆಂದರೆ 'ಮ್ಯಾನೆಟೀ' ಯ ಒರಟೊರಟು ಚರ್ಮದ ಮೇಲೆಲ್ಲ ನಿಬಿಡವಾಗಿ ನೆಲೆಸುವ ರಾಶಿ ರಾಶಿ ಪರಾವಲಂಬಿಗಳನ್ನು ತಿಂದು ಸ್ವಚ್ಛಗೊಳಿಸುವ ವಿಶಿಷ್ಟ ಮತ್ಸ್ಯಗಳ ಗುಂಪುಗಳು ಈ ಕಡಲ ಹಸುಗಳ ಸನಿಹದಲ್ಲೇ ಇರುತ್ತವೆ( ಚಿತ್ರ3) ; ಸದಾ ಸೇವೆಗೆ ಸನ್ನದ್ಧರಾಗಿರುತ್ತವೆ ! ಅದೊಂದು ಅನ್ಯೋನ್ಯ ಸಂಬಂಧದ ಪರಸ್ಪರಾವಲಂಬನೆ.

■ ಎನ್. ವಾಸುದೇವ್